# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

## ಕನ್ನಡ ಜಾಣ ಪರೀಕ್ಷೆ – ೨೦೧೩

**ಪ್ರಶ್ನೆಪತ್ರಿಕೆ – ೪**

## ಹೊಸಗನ್ನಡ ವ್ಯಾಕರಣ ಮತ್ತು ಛಂದಸ್ಸು

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

### ಭಾಗ – ೧

### ಹೊಸಗನ್ನಡ ವ್ಯಾಕರಣ

**I. ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** ೨೦

೧. ಅವ್ಯಯಗಳು ಎಷ್ಟು? ವಿವಿಧ ಅವ್ಯಯಗಳನ್ನು ಉದಾಹರಣೆಗಳೊಂದಿಗೆ ತಿಳಿಸಿ.

೨. ವಚನ ವ್ಯವಸ್ಥೆಯನ್ನು ವಿವರಿಸಿ.

೩. ಲೇಖನ ಚಿಹ್ನೆಗಳಲ್ಲಿ ಎಷ್ಟು ವಿಧ? ನಿದರ್ಶನಗಳ ಮೂಲಕ ವಿವರಿಸಿ.

೪. ಸಂಸ್ಕೃತ ಸಂಧಿಗಳೆಷ್ಟು? ನಿದರ್ಶನಗಳ ಮೂಲಕ ವಿವರಿಸಿ.

೫. ವಿಭಕ್ತಿ ಪ್ರತ್ಯಯಗಳನ್ನು ವಿವರಿಸಿ.

**II.೬. ಯಾವುದಾದರೂ ನಾಲ್ಕಕ್ಕೆ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.** ೪

ಸ್ನೇಹ ಸಭಾ ಧ್ವನಿ ಹಸಾದ
ಸ್ಥಲ ಧ್ಯಾನ ಹರ್ಷ ಸಂಜೆ

೭. **ಮೂರನ್ನು ಬಿಡಿಸಿ ಬರೆದು ಸಂಧಿ/ಸಮಾಸದ ಹೆಸರನ್ನು ತಿಳಿಸಿ.** ೬

ಕುಲವನ್ನು ಮನ್ವಂತರ
ಕಾಲಂದಿಗೆ ಸುಳ್ಳಾಡು

೮. **ಯಾವುದಾದರೂ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** ೨೦

ವರ್ಗೀಯ ವ್ಯಂಜನ ಆದೇಶಸಂಧಿ
ಬಹುವ್ರೀಹಿ ಸಮಾಸ ಕ್ರಿಯಾಪದ
ವಿಶೇಷಣಗಳು ಆವರಣ ಚಿಹ್ನೆ

(ಹಿಂ.ಪುಟ)



### ಭಾಗ – ೨

### ಛಂದಸ್ಸು

**III. ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ.** ೨೦

೯. ಕಂದಪದ್ಯದ ಲಕ್ಷಣಗಳನ್ನು ಸೋದಾಹರಣವಾಗಿ ವಿವರಿಸಿ.

೧೦. ರಗಳೆ ಎಂದರೇನು? ವಿವರಿಸಿ.

೧೧. ಷಟ್ಪದಿ ಲಕ್ಷಣಗಳನ್ನು ಉದಾಹರಣೆ ಸಹಿತ ವಿವರಿಸಿ.

೧೨. ಖ್ಯಾತ ಕರ್ಣಾಟಕಗಳು ಯಾವುವು? ಅವುಗಳಲ್ಲಿ ಒಂದನ್ನು ನಿದರ್ಶನ ಸಹಿತ ವಿವರಿಸಿ.

**IV. ಅ. ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** ೨೦

೧೩. ಮಾತ್ರಾಗಣ ೧೪. ಯತಿ
೧೫. ಸ್ರಗ್ಧರೆ ೧೬. ಉತ್ಸಾಹ ರಗಳೆ
೧೭. ಕುಸುಮ ಷಟ್ಪದಿ ೧೮. ಸರಳ ರಗಳೆ

**ಆ. ಒಂದು ಪದ್ಯಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ತಿಳಿಸಿ.** ೧೦

೧೯. ಆ ರವಮಂ ನಿರ್ಜಿತ ಕಂ
ಠೀರವ ರವಮಂ ನಿರಸ್ತ ಘನರವಮಂ ಕೋ
ಪಾರುಣನೇತ್ರಂ ಕೇಳ್ದಾ
ನೀರೊಳಗಿರ್ದುಂ ಬೆಮರ್ತನುರಗ ಪತಾಕಂ

೨೦. ಮೇಲೊಂದು ಗರುಡ ಹಾರುತಿಹುದು
ಕೆಳಗದರ ನೆರಳು ಓಡುತಿಹುದು
ಅದಕು ಅದರಿಚ್ಚೆ ಹಾದಿ
ಇದಕು ಹರಿದತ್ತ ಬೀದಿ.

***

Created by demo-version of Universal Document Converter. Full version doesn't add this stamp.
WWW.PRINT-DRIVER.COM